ಓ.ಎಸ್. ನಂಃ 176/2021

**<u>ಪಿಡಬ್ಲ್ಯೂಃ1</u>**

**ದಿನಾಂಕಃ 24.07.2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಬಿ.ಕೆ.ಎಸ್ ವಕೀಲರಿಂದಃ</u>**

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ವಾದಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿದ ನಂತರದಲ್ಲಿ ನನ್ನ ಸಹಿಯನ್ನು ಹಾಕಿರುತ್ತೇನೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳ ಬಗ್ಗೆ ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ.2 ರ ದಾಖಲೆಯನ್ನು ನಾನು ಓದಿರುತ್ತೇನೆ. ವಾದಪತ್ರದಲ್ಲಿ ಬರೆಸಿರುವ ದಾವಾ ಆಸ್ತಿಗಳ ಚೆಕ್ಕುಬಂದಿಗೂ ಮತ್ತು ನಿಪಿ.2 ರಲ್ಲಿ ಬರೆಸಿರುವ ದಾವಾ ಆಸ್ತಿಗಳ ಚೆಕ್ಕುಬಂದಿಗಳಿಗೂ ವ್ಯತ್ಯಾಸವಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

2. ವಾದಪತ್ರದ ಐಟಂ ನಂ.1 ರ ಅನುಸೂಚಿ ಆಸ್ತಿಯ ಪಶ್ಚಿಮಕ್ಕೆ ರಸ್ತೆ ಇದೆ ಎಂದು ಬರೆಸಿದ್ದು ನಿಪಿ.2 ರಲ್ಲಿ ದಾವಾ ಐಟಂ ನಂ.1 ರ ಆಸ್ತಿಯ ದಕ್ಷಿಣ ದಿಕ್ಕಿಗೆ ವಿಜಯಕುಮಾರಿರವರಿಗೆ ಸೇರಿದ ಜಮೀನು ಇದೆ ಎಂದು ನಮೂದಾಗಿದ್ದು ಅವರೆಡರ ಪೈಕಿ ಯಾವುದು ಸರಿಯಾದ ಚೆಕ್ಕುಬಂದಿ ಎಂದು ಸಾಕ್ಷಿಗೆ ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಪತ್ರದಲ್ಲಿ ಹೇಳಿರುವ ಹಾಗೆ ದಾವಾ ಐಟಂ ನಂ.1 ರ ಆಸ್ತಿಯ ಪಶ್ಚಿಮ ದಿಕ್ಕಿಗೆ ರಸ್ತೆ ಇರುವುದು ಸರಿಯೆಂದು ನುಡಿದಿರುತ್ತಾರೆ.

3. ವಾದಪತ್ರದ ಐಟಂ ನಂ.1 ರ ಅನುಸೂಚಿ ಆಸ್ತಿಯ ಉತ್ತರಕ್ಕೆ ಜಯಮ್ಮರವರ ಜಮೀನು ಇದೆ ಎಂದು ಬರೆಸಿದ್ದು ನಿಪಿ.2 ರಲ್ಲಿ ದಾವಾ ಐಟಂ ನಂ.1 ರ ಆಸ್ತಿಯ ಉತ್ತರ ದಿಕ್ಕಿಗೆ ಅಪ್ಪಾಜಿಶೆಟ್ಟರವರ ಮಗ ಹುಚ್ಚಣ್ಣಶೆಟ್ಟಿ ರವರಿಗೆ ಸೇರಿದ ಜಮೀನು ಇದೆ ಎಂದು ನಮೂದಾಗಿದ್ದು ಅವರೆಡರ ಪೈಕಿ ಯಾವುದು ಸರಿಯಾದ ಚೆಕ್ಕುಬಂದಿ ಎಂದು ಸಾಕ್ಷಿಗೆ ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಪತ್ರದಲ್ಲಿ ಹೇಳಿರುವ ಹಾಗೆ ದಾವಾ ಐಟಂ ನಂ.1 ರ ಆಸ್ತಿಯ ಉತ್ತರ ದಿಕ್ಕಿಗೆ ಜಯಮ್ಮರವರ ಜಮೀನು ಇರುವುದು ಸರಿಯೆಂದು ನುಡಿದಿರುತ್ತಾರೆ.

4. ವಾದಪತ್ರದ ಐಟಂ ನಂ.1 ರ ಅನುಸೂಚಿ ಆಸ್ತಿಯ ದಕ್ಷಿಣಕ್ಕೆ ಎಂ.ಎನ್.ವಿಜಯಕುಮಾರಿರವರ ಜಮೀನು ಇದೆ ಎಂದು ಬರೆಸಿದ್ದು ನಿಪಿ.2 ರಲ್ಲಿ ದಾವಾ ಐಟಂ ನಂ.1 ರ ಆಸ್ತಿಯ ದಕ್ಷಿಣಕ್ಕೆ ರಾಮೇಗೌಡ ಮತ್ತು ವಾಸುಶೆಟ್ಟಿ ರವರ ಖುಷ್ಕಿ ಜಮೀನು ಇದೆ ಎಂದು

ನಮೂದಾಗಿದ್ದು ಅವರೆಡರ ಪೈಕಿ ಯಾವುದು ಸರಿಯಾದ ಚೆಕ್ಕುಬಂದಿ ಎಂದು ಸಾಕ್ಷಿಗೆ ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಪತ್ರದಲ್ಲಿ ಹೇಳಿರುವ ಹಾಗೆ ದಾವಾ ಐಟಂ ನಂ.1 ರ ಆಸ್ತಿಯ ದಕ್ಷಿಣ ದಿಕ್ಕಿಗೆ ಎಂ.ಎನ.ವಿಜಯಕುಮಾರಿರವರ ಜಮೀನು ಇರುವುದು ಸರಿಯೆಂದು ನುಡಿದಿರುತ್ತಾರೆ.

5. ವಾದಪತ್ರದ ಐಟಂ ನಂ.2 ರ ಅನುಸೂಚಿ ಆಸ್ತಿಯ ಪಶ್ಚಿಮಕ್ಕೆ ಈಶ್ವರಚಾರಿರವರ ಜಮೀನು ಇದೆ ಎಂದು ಬರೆಸಿದ್ದು ನಿಪಿ.2 ರಲ್ಲಿ ದಾವಾ ಐಟಂ ನಂ.2 ರ ಆಸ್ತಿಯ ಪಶ್ಚಿಮ ದಿಕ್ಕಿಗೆ ಎಂ.ಎನ್.ವಿಜಯಕುಮಾರಿರವರಿಗೆ ಸೇರಿದ ಖುಷ್ಕಿ ಜಮೀನು ಇದೆ ಎಂದು ನಮೂದಾಗಿದ್ದು ಅವರೆಡರ ಪೈಕಿ ಯಾವುದು ಸರಿಯಾದ ಚೆಕ್ಕುಬಂದಿ ಎಂದು ಸಾಕ್ಷಿಗೆ ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಪತ್ರದಲ್ಲಿ ಹೇಳಿರುವ ಹಾಗೆ ದಾವಾ ಐಟಂ ನಂ.2 ರ ಆಸ್ತಿಯ ಪಶ್ಚಿಮ ದಿಕ್ಕಿಗೆ ಈಶ್ವರಾಚಾರಿರವರಜಮೀನು ಇರುವುದು ಸರಿಯೆಂದು ನುಡಿದಿರುತ್ತಾರೆ.

6. ವಾದಪತ್ರದ ಐಟಂ ನಂ.2 ರ ಅನುಸೂಚಿ ಆಸ್ತಿಯ ಉತ್ತರಕ್ಕೆ ಎಂ.ಎನ್.ವಿಜಯಕುಮಾರಿರವರ ಜಮೀನು ಇದೆ ಎಂದು ಬರೆಸಿದ್ದು ನಿಪಿ.2 ರಲ್ಲಿ ದಾವಾ ಐಟಂ ನಂ.2 ರ ಆಸ್ತಿಯ ಉತ್ತರಕ್ಕೆ ಪುಟ್ಟಸ್ವಾಮಾಚಾರ ರವರಿಗೆ ಸೇರಿದ ಖುಷ್ಕಿ ಜಮೀನು ಇದೆ ಎಂದು ನಮೂದಾಗಿದ್ದು ಅವರೆಡರ ಪೈಕಿ ಯಾವುದು ಸರಿಯಾದ ಚೆಕ್ಕುಬಂದಿ ಎಂದು ಸಾಕ್ಷಿಗೆ ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ವಾದಪತ್ರದಲ್ಲಿ ಹೇಳಿರುವ ಹಾಗೆ ದಾವಾ ಐಟಂ ನಂ.2 ರ ಆಸ್ತಿಯ ಉತ್ತರಕ್ಕೆ ಎಂ.ಎನ್.ವಿಜಯಕುಮಾರಿರವರ ಜಮೀನು ಇರುವುದು ಸರಿಯೆಂದು ನುಡಿದಿರುತ್ತಾರೆ.

7. ವಾದಪತ್ರದಲ್ಲಿ ತೋರಿಸಿರುವ ಚೆಕ್ಕುಬಂದಿಗಳ ಮಧ್ಯೆ ಇರುವ ಆಸ್ತಿಗಳು ನನ್ನ ಗಂಡನಿಗೆ ವಿಲ್ ಮುಖಾಂತರ ಬಂದಿದೆ ಎಂದು ತೋರಿಸಲು ಬೇರೆ ವಿಲುನಾಮೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ.2 ರ ವಿಲುನಾಮೆಯ ಪ್ರಕಾರ ದಾವಾ ಆಸ್ತಿಗಳು ನನ್ನ ಗಂಡನಿಗೆ ಕಾವೇರಮ್ಮನವರಿಂದ ಬಂದಿರುತ್ತದೆ ಎಂದರೆ ಸರಿ. ನಿಪಿ.2 ರಿಂದ 4 ರ ವಿಲುನಾಮೆಗಳನ್ನು ಬರೆಯುವ ಕಾಲಕ್ಕೆ ದಾವಾ ಆಸ್ತಿಗಳು ಕೇವಲ ಕಾವೇರಮ್ಮನವರ ಹೆಸರಿಗೆ ಇರಲಿಲ್ಲ ಬದಲಾಗಿ ದಾವಾ ಆಸ್ತಿಗಳು ಕಾವೇರಮ್ಮ ಮತ್ತು ವಿಜಯಕುಮಾರಿ ರವರ ಜಂಟಿ ಹೆಸರಿನಲ್ಲಿತ್ತು ಎಂದರೆ ಸರಿ.

8. ನಿಪಿ.2 ರ ವಿಲುನಾಮೆಯಲ್ಲಿ ಬರೆದ ಚೆಕ್ಕುಬಂದಿಗಳಿಗೂ ಮತ್ತು ನಿಪಿ.4 ರ ವಿಲುನಾಮೆಯಲ್ಲಿ ಬರೆದಿರುವ ಚೆಕ್ಕುಬಂದಿಗಳಿಗೂ ವ್ಯತ್ಯಾಸವಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಪಿ.2 ರಿಂದ 4 ರ ವಿಲುನಾಮೆಗಳನ್ನು ಬರೆಯುವಾಗ ದಾವಾ ಆಸ್ತಿಗಳು ಕಾವೇರಮ್ಮ ಮತ್ತು ವಿಜಯಕುಮಾರಿರವರ ಜಂಟಿ ಹೆಸರಿನಲ್ಲಿದ್ದ ಕಾರಣ ತಮಗೆ ಯಾವ ಜಮೀನು ಸೇರಿರುತ್ತದೆ ಎಂದು ಕಾವೇರಮ್ಮನವರಿಗೆ ಗೊತ್ತಿರದ ಕಾರಣ ನಿಪಿ.2 ರಿಂದ 4 ರ ವಿಲುನಾವೆಗಳ ಚೆಕ್ಕುಬಂದಿಗಳಲ್ಲಿ ವ್ಯತ್ಯಾಸವುಂಟಾಗಿರುತ್ತದೆ.

9. 1991 ರ ನಂತರದಲ್ಲಿ ಕಾವೇರಮ್ಮ ಮತ್ತು ವಿಜಯಕುಮಾರಿವರ ಮದ್ಯೆ ಆದ ಮೌಖಿಕ ಪಾಲುವಿಭಜನೆಯ ಪ್ರಕಾರ ದಾವಾ ಆಸ್ತಿಗಳ ಕಂದಾಯ ದಾಖಲೆಗಳಲ್ಲಿ ಯಾವುದೇ ಬದಲಾವಣೆಗಳು ಆಗಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಕೆ.ಆರ್.ನಗರ